**ದಿಃ 15.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು ವಾದಿ ಪರ ವಕೀಲರವರಿಂದ:**

ನನ್ನ ತಂದೆ ನೌಕರಿ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಒಟ್ಟು ಸುಮಾರು 30 ವರ್ಷ ಸೇವೆ ಸಲ್ಲಿಸಿರುತ್ತಾರೆ. ಹಮ್ಮಿನಿ ಮನೆತನದಲ್ಲಿ ನನ್ನ ತಂದೆ ಮತ್ತು ದೊಡ್ಡಪ್ಪ ಇಬ್ಬರು ಮಾತ್ರ ಶಾಲೆಯನ್ನು ಕಲಿತಿದ್ದುರು. ನನ್ನ ದೊಡ್ಡಪ್ಪನ ಹೆಸರು ಬಸ್ಸಪ್ಪ. ನಿಡಿ-7ರಲ್ಲಿ ನ್ಯಾಯಾಲಯದ ತಡೆಆಜ್ಞೆಯ ಆದೇಶವನ್ನು ನಮೂದಿಸಿರುತ್ತದೆ ಎಂದರೆ ಸರಿ. 1965ನೇ ಸಾಲಿನಲ್ಲಿ 3ನೇ ಪ್ರತಿವಾದಿಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಮೂಟೇಷನ ಹಕ್ಕು ದಾಖಲೆ ಮಾಡುವ ಸಮಯದಲ್ಲಿ ಸಂಬಂಧಪಟ್ಟ ಆಸ್ತಿಯಲ್ಲಿ ಹಿತಾಸಕ್ತಿ ಹೊಂದಿದವರಿಗೆ ನೋಟಿಸ ನೀಡುತ್ತಾರೆ ಎಂದರೆ ಸರಿ. ದಾವಾ ಅಸ್ತಿ ಮನೆ ನಂ. 253ಕ್ಕೆ ಸಂಬಂದಿಸಿದಂತೆ ಪಾಲು ವಿಬಾಗ ಆದ ಬಗ್ಗೆ ದಾಖಲೆ ಇರುವುದಿಲ್ಲ. ಮೂಲ ವಾದಿ ಹಾಗೂ ನಾನು ಈಗ ಒಂದೆ ಆಗಿ ಮಿಲಾಪೆ ಆಗಿರುತ್ತೇವೆ ಎಂದರೆ ಸರಿಯಲ್ಲ. ಪಸ್ತೂತ ವಾದಿಗೆ ಆಸ್ತಿಗಳಲ್ಲಿ ಪಾಲು ಸಿಗಬಾರದೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡುಯತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ತಡೆಆಜ್ಞೆ ಇದ್ದರೂ ಸಹ ನಾನು 6ನೇ ಪ್ರತಿವಾದಿ ಹೆಸರಿಗೆ ದಾವಾ ಆಸ್ತಿ ಜಮೀನನ್ನು ಪರಬಾರೆ ಮಾಡಿರುತ್ತೇನೆ ಎಂದರೆ ಸರಿಯಲ್ಲ, ಪರಬಾರೆ ಮಾಡುವ ಸಮಯದಲ್ಲಿ ತಡೆಆಜ್ಞೆ ಇರಲಿಲ್ಲ. ಮೂಲ ವಾದಿ ದಾವಾ ಆಸ್ತಿಗಳಲ್ಲಿ ಪಾಲು ವಿಬಾಗವಾಗಿರುವುದಿಲ್ಲ, ಒಟ್ಟು ಕುಟುಂಬದ ಆಸ್ತಿಗಳಲ್ಲಿ ಪಾಲು ಬೇಕು ಎಂದು ದಾವೆ ಸಲ್ಲಿಸಿದ್ದರು ಎಂದರೆ ಸರಿ. ನಾನು ಗುತ್ತಿಗೆ ದಾರನಾಗಿದ್ದು, ನನಗೆ ಸಾಲಪಡೆಯಲು ಅನುಕೂಲವಾಗಲೆಂದು ನನ್ನ ಹೆಸರಿಗೆ ದಾವಾ ಆಸ್ತಿಗಳನ್ನು ವರ್ಗಾವಣೆ ಮಾಡಲಾಗಿತ್ತು ಎಂದರೆ

ಸರಿಯಲ್ಲ .ನನ್ನ ತಂದೆ ಮರಣ ಹೊಂದಿದ ನಂತರ ಪ್ರಸ್ತೂತ ದಾವೆ ಸಲ್ಲಿಸಲಾಗಿರುತ್ತದೆ ಎಂದರೆ ಸರಿ. 2008ನೇ ಸಾಲಿನಲ್ಲಿ 3ನೇ ಪ್ರತಿವಾದಿ ಹಾಗೂ ನನ್ನ ನಡುವೆ ಪಾಲು ವಿವಾಗದ ಸಲುವಾಗಿ ಜಗಳವಾಯಿತು ಎಂದರೆ ಸರಿಯಲ್ಲ. ಜಗಳವಾಗಿದ್ದರೂ ಸಹ ಆಗಿರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಾಗಲಿ , ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲಿ ಬರೇಸಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಹೆ.ದಿ.&ನ್ಯಾದಂ., ಗೋಕಾಕ.